ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಸಹ ಪರಿಶೀಲನೆ ಮಾಡೋಣ. ಈ ಘಟಪ್ರಭಾ ಮತ್ತು ಮಲಪ್ರಭಾದಿಂದ ಒಂದು ಇಂಚು ನೀರನ್ನೂ ಕೂಡ ಹೆಚ್ಚಿಗೆ ಅಲ್ಲಿಂದ ಕೊಡುವುದಕ್ಕೆ ಸಾಧ್ಯವಿಲ್ಲ ಎತಕ್ಕೆಂದರೆ ಆ ನೀರನ್ನೂ ಪವರ್‌ಗಾಗಿ ಉಪಯೋಗಿಸಿಕೊಳ್ಳಬೇಕಾಗುತ್ತವೆ. ತಮಗೆ ಹೇಳಬೇಕಾದರೆ ಈ ಬಗ್ಗೆ ನಾನು ಮತ್ತು ಶ್ರೀ ಜೆ. ಹೆಚ್ ಪಟೇಲರು ಜಗಳವಾಡಿ ಈ ರೀತಿಯಾಗಿ ತೀರ್ಮಾನ ಮಾಡಿದ್ದೇವೆ. ಈಗ ತಾವು ಇದರಿಂದಲಾದರೂ ನೀರು ಕೊಡಿ ಎನ್ನುವ ಬೇಡಿಕೆಯನ್ನು ಇಟ್ಟಿದ್ದೀರಿ. ಮುಂದೆ ಇದರ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಂಡ ಮೇಲೆ ಸಾಧ್ಯವಾದರೆ ಅದರಲ್ಲಿ ದೊರಕುವುದಾದರೆ ನಿಮ್ಮ ಭಾಗಕ್ಕೆ ಹೆಚ್ಚು ನೀರನ್ನು ಕೊಡಬೇಕೆನ್ನುವ ಆಶಯ ಇಟ್ಟುಕೊಳ್ಳುತ್ತೇನೆ.

ಕೊಳ್ಳೆಗಾಲ ತಾಲ್ಲೂಕಿನ ಅನೇಕ ರೈತರಿಗೆ ಪಟ್ಟಾ ನೀಡದಿರುವ ಬಗ್ಗೆ

ಶ್ರೀ ರಾಜೂಗೌಡ. (ಹಾನಗಲ್) —ಕೊಳ್ಳೆಗಾಲ ತಾಲ್ಲೂಕಿನಲ್ಲಿ ಅನೇಕ ರೈತರುಗಳು ಹತ್ತಾರು ವರ್ಷಗಳಿಂದಲೂ ಪಟ್ಟಾ ಪಡೆಯಲು ತೊಂದರೆಯಾಗಿರುವುದರಿಂದಅವರಿಗೆ ಬಾವಿ ಮುಂತಾದ ಕೆಲಸ ಕಾರ್ಯಗಳನ್ನು ಮಾಡಲು ಇದರಿಂದ ತೊಂದರೆಯಾಗಿರುವುದರಿಂದ ಆ ಬಗ್ಗೆ ತಾವು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ಅನ್ನುವುದರ ಸಲುವಾಗಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ, (ಕಂದಾಯ ಮಂತ್ರಿಗಳು)—ಅಧ್ಯಕ್ಷರೇ, ನನಗೆ ಇದುವರೆಗೆ ಆ ಬಗ್ಗೆ ಇನ್ನೂ ಮಾಹಿತಿ ಬಂದಿಲ್ಲ. ಈ ವಿಚಾರವಾಗಿ ಈಗಾಗಲೇ ಟೆಲೆಕ್ಸ್‌ಮೆಸೆಜ್ ಅನ್ನು ಸಹ ಕಳುಹಿಸಿಕೊಟ್ಟಿದ್ದೇನೆ. ಒನೇ ತಾರೀಖಿನವರೆಗೆ ಟೈಂ ಕೊಡಿ ವಿವರವನ್ನು ತರಿಸಿಕೊಡುತ್ತೇನೆ.

ಕೃತಕ ರೇಷ್ಮೆಯ ದರವನ್ನು ಹೆಚ್ಚಿಸಿರುವ ಬಗ್ಗೆ.

ಶ್ರೀ ಕಡಪಟ್ಟಿ ಶಿವಸಂಗಪ್ಪ —ಮಾನ್ಯ ಅಧ್ಯಕ್ಷರೇ, ಕೃತಕ ರೇಷ್ಮೆಯ ದರವನ್ನು ಪಾರ್ಲಿಮೆಂಟ್ ಚುನಾವಣೆ ಆದನಂತರ ೮ ರೂಪಾಯಿನಿಂದ ೧೧೦ ರೂಪಾಯಿಗೆ ಹೆಚ್ಚಿಸಿರುವುದರಿಂದ ಬಡ ನೇಕಾರರ ಬಹಳ ತೊಂದರೆಯಾಗಿದೆ. ಅಲ್ಲದೆ ಇದರಿಂದ ಅವರಿಗೆ ೧೦-೧೫ ರೂಪಾಯಿ ಲುಕ್ಸಾನು ಬರುತ್ತದೆ. ಮಾರ್ಚ್‌ನಲ್ಲಿ ನಡೆದಂಥಾ ವಿಧಾನಸಭಾ ಚುನಾವಣೆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳಿಗೂ ಈ ದರವನ್ನು ಕಡಿಮೆ ಮಾಡಿಕೊಟ್ಟು ಆ ಬಡ ನೇಕಾರರಿಗೆ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸಲಾಗಿತ್ತು. ಆದರೂ ಸಹ ಇದರ ಬಗ್ಗೆ ಏನೂ ಕಾರ್ಯಕ್ರಮ ಕೈಗೊಂಡಿಲ್ಲ. ಅವರು ಇವತ್ತಿನ ದಿವಸ ಒಪ್ಪತ್ತು ಊಟಕ್ಕೂ ಕಷ್ಟವಾಗಿ ಬಹಳ ತೊಂದರೆಯಲ್ಲಿದ್ದಾರೆ ಆದುದರಿಂದ ಅವರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಏನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ. (ಸಣ್ಣಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು) ನಾನು ಈ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತೇನೆ. ಅದು ಈ ರೀತಿ ಇದೆ.

ಮಾನ್ಯ ಸದಸ್ಯರು ತಮ್ಮ ಸೂಚನೆಯಲ್ಲಿ ಕೃತಕ ರೇಷ್ಮೆಯ ದರ ಲೋಕಸಭೆಯ ಚುನಾವಣೆಯ ನಂತರ ಶೇಕಡಾ ೨೦ ರಿಂದ ೩೦ ರವರೆಗೆ ಏರಿದೆಯೆಂದು ಮತ್ತು ಆದರಿಂದಾಗಿ ಬಿಜಾಪುರ ಜಿಲ್ಲೆಯ ನೇಕಾರರಿಗೆ ಪ್ರತಿ ಸೀರೆಯ ಮೇಲೆ ರೂ. ೮ ರಿಂದ ೧೦ ರವರೆಗೆ ನಷ್ಟ ಹೊಂದ ಬೇಕಾಗಿದೆ ಎಂದು ಪ್ರಸ್ತಾಪಿಸಿದ್ದಾರೆ.

ಈ ಸಂಬಂಧದಲ್ಲಿ ಸದನದ ಗಮನಕ್ಕೆ ತರುವುದೇನೆಂದರೆ, ನೇಕಾರರಿಗೆ ಕೃತಕ ರೇಷ್ಮೆಯನ್ನು ಸರಬರಾಜು ಮಾಡುವ ವಿಷಯದಲ್ಲಿ ರಾಜ್ಯ ಸರಕಾರದ ನೇರ ಪಾತ್ರವಿರುವುದಿಲ್ಲ ಹಾಗೂ ಕೃತಕ ರೇಷ್ಮೆಯ ಬೆಲೆ ಏರಿಕೆಯಲ್ಲಿ ರಾಜ್ಯ ಸರಕಾರದ ಪೊಣೆ ಏನೂ ಇರುವುದಿಲ್ಲ. ಕೃತಕ ರೇಷ್ಮೆಯ ನೇಯ್ಗೆಯಲ್ಲಿ ತೊಡಗಿದ ನೇಕಾರರು ತಮಗೆ ಬೇಕಾದ ನೂಲನ್ನು ನೇರವಾಗಿ ಗುಜೇದ ಗುಡ್ಡ, ಬನಹಟ್ಟಿ, ಇಳಕಲ್, ಬೆಳಗಾವಿ ಮುಂತಾದ ಸ್ಥಳಗಳಲ್ಲಿಯ ವ್ಯಾಪಾರಸ್ಥರಿಂದ ಖರೀದಿಸುತ್ತಾರೆ. ಈ ವ್ಯಾಪಾರಸ್ಥರು ಕೃತಕ ರೇಷ್ಮೆಯನ್ನು ನೆರೆ ರಾಜ್ಯಗಳ ಗಿರಣಿಗಳಿಂದ ಕೊಂಡು ಕೊಳ್ಳುತ್ತಾರೆ.